# ಸರ್ವಂ ಜೀನ್ಸ್ ಮಯಂ..



**ಜೀನ್ಸ್ ಇಂದು ಯುವಜನತೆಯ 'ಫ್ಯಾಷನ್ ಸಿಂಬಲ್' ಆಗಿ ವಿಶ್ವದಲ್ಲಿ ತನ್ನ ಛಾಪು ಒತ್ತಿದೆ. ಪ್ಯಾಂಟ್, ಕೋಟ್, ಶಾರ್ಟ್ಸ್, ಶರ್ಟ್ಸ್.. ಹೀಗೆ ಜೀನ್ಸ್ ಬಟ್ಟೆ ಆವರಿಸದ ಜಾಗವಿಲ್ಲ. ಬ್ಯಾಗ್, ಪರ್ಸ್ ಮುಂತಾದ ಫ್ಯಾಷನ್ ಆ್ಯಸೆಸ್ಸರಿಯಾಗಿಯೂ ಜನಪ್ರಿಯವಾಗಿದೆ. ಒಟ್ಟಿನಲ್ಲಿ ಸಾರ್ವಕಾಲಿಕ ಉಡುಪು ಆಗಿರುವ ಜೀನ್ಸ್ ಎಂದಿಗೂ ಔಟ್‌ಡೇಟೆಡ್ ಆಗದ ಫ್ಯಾಷನ್ ಆಗಿಯೂ ರೂಪುಗೊಂಡಿದೆ.**

**■ ಸವಿತಾ ಶಾಂತಪ್ರಿಯ**

ವಿಶ್ವದೆಲ್ಲೆಡೆ ಸ್ತ್ರೀಪುರುಷ ಭೇದವಿಲ್ಲದೆ ಎಲ್ಲ ವಯೋಮಾನದವರೂ ಎಲ್ಲ ವರ್ಗದವರೂ ಇಷ್ಟಪಡುವ ಏಕೈಕ ಉಡುಪು ಜೀನ್ಸ್. ಜೀನ್ಸ್ ಪ್ಯಾಂಟ್, ಹಾಫ್ ಪ್ಯಾಂಟ್, ತ್ರೀಫೋರ್ತ್, ಶಾರ್ಟ್ಸ್, ಶರ್ಟ್, ಸ್ಕರ್ಟ್, ಕೋಟ್, ಬ್ಯಾಗ್.. ಹೀಗೆ ಜೀನ್ಸ್ ಬಟ್ಟೆ ವಿಧವಿಧ ವಿನ್ಯಾಸಗಳಲ್ಲಿ ಬಂದು ಜನರನ್ನು ತನ್ನೆಡೆಗೆ ಆಕರ್ಷಿಸುತ್ತಿದೆ. ಜೀನ್ಸ್ ಫ್ಯಾಷನೆಬಲ್, ಕಂಫರ್ಟ್; ಮಿತವ್ಯಯಕಾರಿ; ಧರಿಸಿದರೆ ಹೆಚ್ಚು ಆಕರ್ಷಕ.. ಹೀಗೆಲ್ಲಾ ಗುಣಗಾನ ಮಾಡುತ್ತಿರುತ್ತಾರೆ ಜೀನ್ಸ್ ಪ್ರಿಯರು. ಇಂಥವರ ಆಸೆಗಳಿಗೆ ತಕ್ಕಂತೆ ಕಂಪನಿಗಳೂ ಸಹ ಬಗೆ ಬಗೆಯ ಬಣ್ಣಗಳಲ್ಲಿ ಬಗೆ ಬಗೆಯ ವಿನ್ಯಾಸಗಳಲ್ಲಿ ಬೇರೆ ಬೇರೆ ವಯೋಮಾನದವರಿಗೆ ಹೊಂದುವಂತಹ ಜೀನ್ಸ್ ಪ್ಯಾಂಟ್, ಶರ್ಟ್‌ಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುತ್ತಿವೆ. ಜನ ಮುಗಿಬಿದ್ದು ಕೊಳ್ಳುತ್ತಾರೆ, ಧರಿಸುತ್ತಾರೆ, ಖುಷಿಪಡುತ್ತಾರೆ.

ಒಂದು ಕಾಲದಲ್ಲಿ ಅಮೆರಿಕದ ಕಾರ್ಮಿಕ ವರ್ಗದವರ ಹೆಚ್ಚು ಬಾಳಿಕೆಯ ಬಟ್ಟೆಯ ಬೇಡಿಕೆಯನ್ನು ಈಡೇರಿಸುವ ಉದ್ದೇಶದಿಂದ 1860ರ ಸುಮಾರಿಗೆ ಮಾರುಕಟ್ಟೆಗೆ ಬಂದ ನೀಲಿ ಜೀನ್ಸ್ ಇಂದು ವಿಶ್ವದ ಎಲ್ಲೆಡೆಗೆ ಪಯಣಿಸಿ ಎಲ್ಲರ ಹೃದಯವನ್ನು ಗೆದ್ದಿದೆ. ಬೇರೆ ಬೇರೆ ಬಗೆಯ ಬ್ರಾಂಡ್‌ಗಳು ವಿಧ ವಿಧದ ವಿನ್ಯಾಸದಲ್ಲಿ ಆಕರ್ಷಿಸುತ್ತಿವೆ. ಕಾರ್ಮಿಕ ವರ್ಗದವರಿಗಾಗಿಯೇ ತಯಾರುಗೊಂಡು ಅವರು ಮಾತ್ರ ಧರಿಸುತ್ತಿದ್ದ ಜೀನ್ಸ್ ಬಟ್ಟೆಗಳು ಸ್ತ್ರೀ ಪುರುಷ ಅಸಮಾನತೆಯನ್ನು ಹೋಗಲಾಡಿಸುವಲ್ಲಿಯೂ ಮುಖ್ಯ ಪಾತ್ರ ವಹಿಸಿದೆ.

ಜೀನ್ಸ್ ಇಂದು ಯುವಜನತೆಯ 'ಫ್ಯಾಷನ್ ಸಿಂಬಲ್' ಆಗಿ ವಿಶ್ವದಲ್ಲಿ ತನ್ನ ಛಾಪು ಒತ್ತಿದೆ. ಯಾವ ವರ್ಗಕ್ಕೆ ಸೇರಿರಲಿ ವಿಶ್ವದ ಯಾವ ಭಾಗದಲ್ಲೇ ವಾಸಿಸಲಿ, ಜೀನ್ಸ್ ಧರಿಸಿದರೆ ತಾವು ಸಮಾನರು, ಆಧುನಿಕ ಮನೋಭಾವದವರು ಎಂಬ ಭಾವ ಜನರಲ್ಲಿ ಮೂಡಿಸುತ್ತಿದೆ. ಎಂದಿಗೂ ಔಟ್‌ಡೇಟೆಡ್ ಆಗದ ಫ್ಯಾಷನ್ ಆಗಿ ಜೀನ್ಸ್ ರೂಪುಗೊಂಡಿದೆ.

ಗಣಿಗಳಲ್ಲಿ ದುಡಿಯುವ ಕಾರ್ಮಿಕರು, ದನ ಕಾಯುವವರು, ದೊಡ್ಡ ದೊಡ್ಡ ಕಂಪೆನಿಗಳ ಮಾಲಕರು, ಬ್ಯಾಂಡ್ ಸಿಂಗರ್ಸ್, ಸಿನಿಮಾ ನಟರು.. ಹೀಗೆ ಎಲ್ಲರನ್ನು ಅತ್ಯಂತ ಸುಲಭವಾಗಿ ತನ್ನ ತೆಕ್ಕೆಯೊಳಗೆ ತಂದುಕೊಂಡ ಜೀನ್ಸ್ ಶ್ರೇಷ್ಠ ನಟಿ ಮರ್ಲಿನ್ ಮನ್ರೋಳನ್ನೂ ಬಿಡಲಿಲ್ಲ, ಆಪಲ್ ಕಂಪೆನಿಯ ಸ್ಟೀವ್ ಜಾಬ್ಸ್‌ನ್ನೂ ಬಿಡಲಿಲ್ಲ. ಎಲ್ಲರೂ ಅದರ ದಾಸರು. ಆರಂಭದ ಲಿವೈಸ್ ಜೀನ್ಸ್ ಹಾಗೂ ಇತರ ಕಿಲ್ಲರ್, ಕಾಲ್ವಿನ್, ಲೀ ಮುಂತಾದ ಬ್ರಾಂಡ್‌ಗಳು ಜನರೆಡೆಗೆ ಬರುತ್ತಿವೆ.

ಡೆನಿಮ್ ಎಂಬ ವಿಶಿಷ್ಟ ರೀತಿಯ ಉಣ್ಣೆಯಿಂದ ತಯಾರುಗೊಳ್ಳುವ ಈ ಬಟ್ಟೆ ಹೆಚ್ಚು ಕಾಲ ಬಾಳುವುದರ ಜೊತೆಗೆ ಬೇಗನೆ ಬೆವರು ಹೀರಿಕೊಳ್ಳುವುದು ಹಾಗೂ ಸೆಕೆಯಿದ್ದರೂ ತಣ್ಣಗಿನ ಅನುಭವವನ್ನು ಕೊಡುವುದು ಇದರ ಹೆಚ್ಚುಗಾರಿಕೆ. ಸಾಮಾನ್ಯ ಜನರಿಗೆ ಹೊಂದಿಕೆಯಾಗುವ ಕಡಿಮೆ ಬೆಲೆ ಜೀನ್ಸ್ ಉಡುಪುಗಳಿಂದ ಹಿಡಿದು ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಜೀನ್ಸ್ ಉಡುಪುಗಳು ಲಭ್ಯವಿವೆ.

ಹಾಗೆಂದು ಜೀನ್ಸ್ ಬಟ್ಟೆ ಸುಲಭವಾಗಿ ಪ್ರವೇಶ ಪಡೆದಿದೆಯೆಂದಲ್ಲ. ಅದರ ವಿರುದ್ಧ ಹೋರಾಟಗಳಾಗಿವೆ, ಇಂದಿಗೂ ನಡೆಯುತ್ತಿದೆ. ಇಂದೂ ದೊಡ್ಡ ಕಾರ್ಪೊರೇಟ್ ಕಂಪೆನಿಗಳಿಗೆ ಜೀನ್ಸ್ ಬಟ್ಟೆಗೆ ಪ್ರವೇಶವಿಲ್ಲ, ಶಾಲಾ ಕಾಲೇಜುಗಳಿಗೆ ಪ್ರವೇಶವಿಲ್ಲ. ಸಂಪ್ರದಾಯಬದ್ಧ ಕಾರ್ಯಕ್ರಮಗಳಲ್ಲಿ ಜೀನ್ಸ್ ಧರಿಸಿ ಬಂದರೆ ವಿಚಿತ್ರವಾಗಿ ನೋಡುವ ವರ್ತನೆ ಇನ್ನೂ ಹೋಗಿಲ್ಲ. ಅನೇಕ ದೇವಾಲಯಗಳಲ್ಲೂ ಜೀನ್ಸ್ ಬಟ್ಟೆಗೆ ನಿಷೇಧವಿದೆ.

ಜೀನ್ಸ್ ಬ್ಯಾನ್ ಬಗ್ಗೆ ನಿವೃತ್ತ ಪ್ರಾಂಶುಪಾಲರೊಬ್ಬರು ಹೇಳುವುದು 'ಅದು ಕೊಳಕು. ಶಾಲಾ ಕಾಲೇಜುಗಳಲ್ಲಿ ಅದನ್ನು ಧರಿಸುವುದು ಶಿಷ್ಟತೆಯಲ್ಲ. ಚಿತ್ರ ವಿಚಿತ್ರ ವಿನ್ಯಾಸವನ್ನು ಹೊಂದಿರುತ್ತದೆ. ವಿದ್ಯಾರ್ಥಿಗಳು ತಿಂಗಳುಗಟ್ಟಲೆ ಸ್ವಚ್ಛಗೊಳಿಸುವುದಿಲ್ಲ. ತರಗತಿಗಳಲ್ಲಿ ಕೆಟ್ಟ ವಾಸನೆ ಬರುತ್ತಿರುತ್ತದೆ. ಅದರ ವಿನ್ಯಾಸವೂ ವಿಚಿತ್ರ,